

# ಅಸ್ತಕಾಲದ ದ್ವಂದ್ವ

ಕಲಾವಿದನ ಬದುಕಿನ ಮೂಲಕ ಹಳ್ಳಿ ಬದುಕಿನ ಚಿತ್ರಣವನ್ನು ಕಟ್ಟುವ 'ಅಸ್ತ' ಕಿರುಚಿತ್ರ, ಪ್ರತಿಮೆಯನ್ನು ಕಟ್ಟುವ ಹಂಬಲದಿಂದ ಗಮನಸೆಳೆಯುತ್ತದೆ.

■ ಗೌರಿ

ಕುಂದಾಪುರ ಸೀಮೆಯ ಕಲಾವಿದನೊಬ್ಬನ ಬದುಕಿನ ದುರಂತಕಥನವನ್ನು ಬಿಂಬಿಸುವ 'ಬೆಸ್ಟ್ ಆ್ಯಕ್ಟರ್' ಎಂಬ ಕಿರುಚಿತ್ರವನ್ನು ಕೆಲವು ವಾರಗಳ ಹಿಂದೆ ಪರಿಚಯಿಸಲಾಗಿತ್ತು. ಹಾಗೆಯೇ ಮಲೆನಾಡಿನ ಹಳ್ಳಿಗಳು ವೃದ್ಧಾಶ್ರಮಗಳಾಗುತ್ತಿರುವ ಎಳೆಯನ್ನು ಇಟ್ಟುಕೊಂಡು ರೂಪಿಸಿದ 'ವಡ್ಡಾರಾಧಕ' ಎಂಬ ಇನ್ನೊಂದು ಕಿರುಚಿತ್ರದ ಕುರಿತೂ ಇಲ್ಲಿಯೇ ಬರೆಯಾಗಿತ್ತು. ಪ್ರದೀಪ್ ಪರಮೇಶ್ವರ್ ನಿರ್ದೇಶನದ 'ಅಸ್ತ' ಕಿರುಚಿತ್ರ ಈ ಎರಡೂ ಎಳೆಗಳನ್ನೂ ಜೋಡಿಸಿ ಹೆಣೆದ ಕಿರುಚಿತ್ರ. ಕಲಾವಿದನ ಬದುಕಿನ ಮೂಲಕವೇ ಹಳ್ಳಿಯ ಪರಿಸ್ಥಿತಿಯನ್ನೂ ತೆರೆದಿಡುತ್ತ ಹೋಗುವ ಈ ಕಿರುಚಿತ್ರ ಹಲವು ಕಾರಣಗಳಿಗೆ ಕುತೂಹಲ ಹುಟ್ಟಿಸುತ್ತದೆ.

ಶಾಮಣ್ಣ ಯಕ್ಷಗಾನ ಕಲಾವಿದ. ಮೂರು ಸಂಸಾರ ವಾಸಿಸುವಷ್ಟು ದೊಡ್ಡ ಮನೆ ಇದೆ. ಆದರೆ ಮನೆಯಲ್ಲಿ ಶಾಮಣ್ಣನೊಬ್ಬನೆ. ಅವನಿಗೆ ಪ್ರತಿದಿನ ದೈವದ ಕುಣಿತದ ಕನಸು ಬೀಳುತ್ತದೆ. ಅದನ್ನು ಕಂಡು ಬೆಚ್ಚಿಯೇ ಅವನ ಬೆಳಗಾಗುವುದು.

ಮುಂಬೈನಿಂದ ಇತ್ತೀಚೆಗಷ್ಟೇ ಊರಿಗೆ ಬಂದವ ರವಿ. ಮುಂಬೈನಿಂದ ತಂದ ದುಡ್ಡನ್ನೆಲ್ಲ ಊರಲ್ಲಿ ಕಳೆದುಕೊಂಡು, ಹಾಕಿಕೊಳ್ಳಲು ಪ್ಯಾಂಟೂ ಇಲ್ಲದೆ ಪಂಚೆ ಉಡುವ ಪರಿಸ್ಥಿತಿ ಅವನದು. ಇನ್ನೊಬ್ಬ ಹುಡುಗ ಡಿಕಾಸ್ಟ. ಇನ್ನೂ ಎಂಟ್ಹತ್ತು ವರ್ಷದ ಈ ಪೋರ ಮಹಾ ಚೂಟಿ.

ಈ ಮೂರು ಪಾತ್ರಗಳ ಮೂಲಕ ಹಳ್ಳಿಬದುಕಿನ ಚಿತ್ರಣವನ್ನು ಕಟ್ಟಿಕೊಡುವ ಪ್ರಯತ್ನ ಪ್ರದೀಪ್ ಪರಮೇಶ್ವರ್ ಅವರದು. ಎಲ್ಲಿಯೂ ಕೃತಕ ಅನಿಸದ ಹಾಗೆ, ಶೋಕೇಸ್ ಅನಿಸದ ಹಾಗೆ ತನ್ನ ಕಥೆಯ ಜಾಡಿನಲ್ಲಿಯೇ ಅದು ನಡೆಯುವ ಪರಿಸರವನ್ನೂ ಕಟ್ಟಿಕೊಟ್ಟಿರುವ ನಿರ್ದೇಶಕರ ಕೌಶಲವನ್ನು ಮೆಚ್ಚಲೇಬೇಕು. ಈ ಸೊಗಡೇ ತಾಂತ್ರಿಕವಾಗಿ ಕಾಣಿಸುವ ಹಲವು ದೋಷಗಳನ್ನು ಮರೆಸುವಷ್ಟು, ಅಥವಾ ಸಹಿಸಿಕೊಳ್ಳುವಂತೆ ಮಾಡುವಷ್ಟು ಶಕ್ತವಾಗಿದೆ.



ಚಿತ್ರ: ಅಸ್ತ
ನಿರ್ದೇಶನ: ಪ್ರದೀಪ್ ಪರಮೇಶ್ವರ್
ಸಂಕಲನ/ಛಾಯಾಗ್ರಹಣ: ಗಣೇಶ್ ಹೆಗ್ಡೆ
ತಾರಾಬಳಗ: ಸರ್ವ ಗಾಣಿಗ, ಚಂದನ್ ಗಾಣಿಗ, ಪ್ರದೀಪ್ ಪರಮೇಶ್ವರ್, ವಾಮನ ಗಾಣಿಗ
ಸಂಗೀತ: ರಿಚರ್ಡ್, ತೇಜಸ್

ಕಲಾವಿದ ಶಾಮಣ್ಣನ ಮಗ ದುಬೈನಲ್ಲಿದ್ದಾನೆ. ಅವನಿಗೆ ಈ ಊರಿನ ಮನೆಯ ಮೇಲೆ ಕಣ್ಣಿದೆ. ಅಪ್ಪನಿಗೆ ಊರ ಆಸ್ತಿ ಮಾರಿ ದುಬೈಗೆ ಬಾ ಅಥವಾ ಯಾವುದಾದರೂ ವೃದ್ಧಾಶ್ರಮ ಸೇರಿಕೋ ಎಂದು ಒತ್ತಾಯ ಮಾಡುತ್ತಿದ್ದಾನೆ. ಆದರೆ ರವಿ, ಡಿಕಾಸ್ಟನಂಥವರನ್ನು, ತಾನು ಹುಟ್ಟಿ ಬೆಳೆದ ಊರನ್ನು ಬಿಟ್ಟು ಈ ಇಳಿವಯಸ್ಸಿನಲ್ಲಿ ಹೇಗೆ ಹೋಗಲಿ ಎಂಬ ತೊಳಲಾಟ ಶಾಮಣ್ಣನದು.

ಮಕ್ಕಳನ್ನು ನಗರಕ್ಕೆ ಕಳುಹಿಸಿ ಊರಲ್ಲಿ ವೃದ್ಧಾಪ್ಯಜೀವನ ಸಾಗಿಸುತ್ತಿರುವ ಬಹುತೇಕರ ದ್ವಂದ್ವವೂ ಇದೆ. 'ಇಲ್ಲಿರಲಾರೆ ಅಲ್ಲಿಗೆ ಹೋಗಲಾರೆ...' ಈ ದ್ವಂದ್ವವನ್ನು ಚಿತ್ರಿಸುವ ಹಲವು ಪ್ರಯತ್ನಗಳು ಮತ್ತೆ ಮತ್ತೆ ನಡೆದಿವೆ. ಹಳ್ಳಿಗಳು ನಿರ್ಜೀವಗೊಳ್ಳುತ್ತಿರುವುದನ್ನು ಬಿಂಬಿಸುವ ಇಂಥ ಬಹುತೇಕ ಚಿತ್ರಗಳು ಅದರ ಇನ್ನೊಂದು ಆಯಾಮವನ್ನು ಸ್ಪರ್ಶಿಸದೇ ನಗರವನ್ನು ಮತ್ತು ಜೀವನೋಪಾಯಕ್ಕಾಗಿ ನಗರದಲ್ಲಿ ನೌಕರಿ ಮಾಡುತ್ತ ಇರುವವರನ್ನು ಖಳಸ್ಥಾನದಲ್ಲಿ ನಿಲ್ಲಿಸಿ ಸುಮ್ಮನಾಗುತ್ತವೆ. ಆ ಖಳರಲ್ಲಿ ಚಿಕ್ಕಂದಿನಿಂದಲೂ ನಗರದ ಕನಸನ್ನು, ಹಣದ ದಾಹವನ್ನು ಬಿತ್ತಿದವರು ಯಾರು? ಅವರೊಂದು ವೇಳೆ ಮರಳಿ ಹಳ್ಳಿಗೆ ಬಂದರೆ ಅವರನ್ನು ಸ್ವೀಕರಿಸಲು ಹಳ್ಳಿ ಸಿದ್ಧವಾಗಿದೆಯೇ? ಇಂದು ಸಂತ್ರಸ್ಥರಾಗಿ ಚಿತ್ರಿತಗೊಳ್ಳುತ್ತಿರುವ ವೃದ್ಧರೇ ಅವರೊಟ್ಟಿಗೆ ನೆಮ್ಮದಿಯಾಗಿ ಬದುಕಲು ಸಾಧ್ಯವೇ? ಹಳ್ಳಿಗಳೆಲ್ಲ ನಂದವನಗಳಾಗಿಬಿಡುತ್ತವೆಯೇ? ಈ ಎಲ್ಲ ಪ್ರಶ್ನೆಗಳಿಗೆ ಬಹುತೇಕ ಚಿತ್ರಗಳು ಮುಖಾಮುಖಿಯಾಗದೆ, ಹಳ್ಳಿಯ ಇಂದಿನ ಸ್ಥಿತಿಯ ಸಂಕೀರ್ಣತೆಯನ್ನು ಧ್ವನಿಸುವ ರಿಸ್ಕ್ ತೆಗೆದುಕೊಳ್ಳದೆ, ಬ್ಲ್ಯಾಕ್ ಅಂಡ್ ವೈಟ್ ಆಗಿ ಚಿತ್ರಿಸಿ ಅನುಕಂಪ ಉಕ್ಕಿಸಿ ಸುಮ್ಮನಾಗುತ್ತವೆ. 'ಅಸ್ತ' ಕಿರುಚಿತ್ರದ ಮಿತಿ ಇರುವುದೂ ಇಲ್ಲಿಯೇ.

ಈ ಮಿತಿಯ ಒಳಗಡೆಗೇ ನಿರ್ದೇಶಕರ ಪ್ರತಿಮಾವ್ಯಾಮೋಹ ಗಮನಸೆಳೆಯುತ್ತದೆ. ಬಾಲ್ಯ, ಯೌವನ ಮತ್ತು ವೃದ್ಧಾಪ್ಯ ಸ್ಥಿತಿಗಳನ್ನು ಮೂರು ಪಾತ್ರಗಳ ಮೂಲಕ ಜೋಡಿಸಿದ್ದು ಗಮನೀಯವಾಗಿದೆ. ಹಲವು ಕಡೆಗಳಲ್ಲಿ ಪ್ರತಿಮೆಯನ್ನು ಕಟ್ಟುವ ಅವರ ಹಂಬಲದ ಸೂಚನೆಗಳು ಕಾಣಿಸುತ್ತವೆ. ಆದರೆ ನೋಡುಗರಿಗೆ ಅದು ಅರ್ಥ ಆಗುತ್ತದೋ ಇಲ್ಲವೋ ಎಂಬ ಅನುಮಾನದಲ್ಲಿ ಸಂಭಾಷಣೆಯಲ್ಲಿಯೂ ಅದನ್ನು ಹೇಳಿಸಿ ವಾಚ್ಯಗೊಳಿಸಿರುವುದು ಕಿರಿಕಿರಿ ಹುಟ್ಟುತ್ತದೆ. ವಾಚ್ಯವಾದಷ್ಟೂ ಒಂದು ಪ್ರತಿಮೆ ತನ್ನ ಧ್ವನಿಶಕ್ತಿಯನ್ನು ಕಳೆದುಕೊಳ್ಳುತ್ತಲೇ ಹೋಗುತ್ತದಲ್ಲವೇ?

ಬದುಕನ್ನು ಇನ್ನಷ್ಟು ಸಂಕೀರ್ಣವಾಗಿ ಅರ್ಥ ಮಾಡಿಕೊಳ್ಳುವ ಮತ್ತು ಅಷ್ಟೇ ಶ್ರದ್ಧೆಯಿಂದ ಅದನ್ನು ಧ್ವನಿಸುವ ಪ್ರತಿಮೆಯನ್ನು ಕಟ್ಟುವ ಪ್ರಯತ್ನವನ್ನು ಮಾಡಿದರೆ ಪ್ರದೀಪ್ ಅವರಿಂದ ಖಂಡಿತ ಗಮನಾರ್ಹ ಪ್ರಯತ್ನಗಳನ್ನು ನಿರೀಕ್ಷಿಸಬಹುದು.

ಈ ಕಿರುಚಿತ್ರ ವೀಕ್ಷಣೆಗೆ **bit.ly/2LWkqbt** ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.